**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಕೊಳ್ಳೇಗಾಲ**

**ಸಿ.ಸಿ. ನಂ.80/2020**

**ಪಿರ್ಯಾದುದಾರರುಃ ವಿರುದ್ಧ ಆರೋಪಿಃ**

ಕಾರ್ಖಾನೆಗಳ ಸಹಾಯಕ ನಿರ್ದೇಶಕರು,

ಮೈಸೂರು ವಿಭಾಗ-2 ಶ್ರೀನಿವಾಸ ಕೆ.ಹಚ್. ಮತ್ತು ಇನ್ನೊಬ್ಬ

## ಆಪಾದನೆ

**ಶ್ರೀ ಆನಂದ ಎಂ**., ಎಂ.ಎ., **ಎಲ್.ಎಲ್.ಎಂ.**, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂ. ಗಳು**,** ಕೊಳ್ಳೇಗಾಲ ಆದ ನಾನು**,**

1. ಶ್ರೀನಿವಾಸ ಕೆ.ಹಚ್. ಅನುಭವದಾರ, ಕೆ ಎಸ್ ಆರ್ ಟಿ ಸಿ ಬಸ್ ಡಿಪೋ, ಕೊಳ್ಳೇಗಾಲ ಪಟ್ಟಣ.
2. ಸುಬ್ರಮಣ್ಯ ಬಿ.ಟಿ. ವ್ಯವಸ್ಥಾಪಕರು, ಕೆ ಎಸ್ ಆರ್ ಟಿ ಸಿ ಬಸ್ ಡಿಪೋ, ಕೊಳ್ಳೇಗಾಲ ಪಟ್ಟಣ.

ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಣೆಯನ್ನು ಹೊರೆಸುವುದೇನೆಂದರೆಃ

1.ದಿನಾಂಕಃ 18.01.2019 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ಡಿಪೋ, ಕೊಳ್ಳೇಗಾಲ ಪಟ್ಟಣದಲ್ಲಿ ಸಿ.ಶಿವಣ್ಣ ಎಂಬ ಕಾರ್ಮಿಕನು ಎರಡೂ ಬಸ್‌ಗಳ ಮಧ್ಯದಲ್ಲಿ ಸಿಲುಕಿಕೊಂಡ ಪರಿಣಾಮ ಅಪಘಾತ ಸಂಭವಿಸಿ ಕೆಳಗೆ ಬಿದ್ದು ಮಾರಣಾಂತಿಕ ಅಪಘಾತ ಸಂಭವಿಸಿದ್ದು ರಾಂಪ್‌ನಲ್ಲಿದ್ದ ಕೆಎ 10 ಎಎಫ್ 0364 ಬಸ್ಸನ್ನು ಘಟಕದ ಪಾರ್ಕಿಂಗ್ ಯಾರ್ಡ್ ನಲ್ಲಿ ಪಾರ್ಕ್ ಮಾಡಲು ಚಾಲಕನನ್ನು ಬಿಡದೇ ಟೆಕ್ನಿಕಲ್ ಅಸಿಸ್ಟೆಂಟ್ ಆಗಿರುವ ಮತ್ತು ಚಾಲಕರಲ್ಲದ ಪಿ.ರಾಜಶೇಖರಮೂರ್ತಿ ರವರನ್ನು ಕೆ ಎಸ್ ಆರ್ ಟಿ ಸಿ ಅನುಭವದಾರ ಹಾಗೂ ವ್ಯವಸ್ಥಾಪಕರಾದ ನೀವುಗಳು ಬಿಟ್ಟಿದ್ದು ಮತ್ತು ಯಾವುದೇ ರೀತಿಯ ಅಪಘಾತಗಳಾಗದಂತೆ ಎಚ್ಚರ ವಹಿಸದೆ ಮತ್ತು ಸೂಕ್ತ ಕಾರ್ಯವಿಧಾನಗಳನ್ನು ಅಳವಡಿಸದೇ ನಿರ್ಲಕ್ಷಿಸಿದ್ದು, ಆ ಮೂಲಕ ಆರೋಪಿಗಳಾದ ನೀವು ಕರ್ನಾಟಕ ಕಾರ್ಖಾನೆಗಳ ನಿಯಮಗಳು1969 ರ ನಿಯಮ 84 ನ್ನು ಉಲ್ಲಂಘನೆ ಮಾಡಿ ಕಾರ್ಖಾನೆಗಳ ಕಾಯ್ದೆ 1948 ರ ಕಲಂ 92 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವಿರಿ.

2. ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ರಾಂಪ್‌ನಲ್ಲಿದ್ದ ಕೆಎ 10 ಎಎಫ್ 0364 ಬಸ್ಸನ್ನು ಘಟಕದ ಪಾರ್ಕಿಂಗ್ ಯಾರ್ಡ್ ನಲ್ಲಿ ಪಾರ್ಕ್ ಮಾಡಲು ಚಾಲಕನನ್ನು ಬಿಡದೇ ಟೆಕ್ನಿಕಲ್ ಅಸಿಸ್ಟೆಂಟ್ ಆಗಿರುವ ಮತ್ತು ಚಾಲಕರಲ್ಲದ ಪಿ.ರಾಜಶೇಖರಮೂರ್ತಿ ರವರನ್ನು ಬಿಟ್ಟಿದ್ದರಿಂದ ಹಾಗೂ ನುರಿತ ಚಾಲಕರೇ ಬಸ್ಸನ್ನು ಘಟಕದಲ್ಲಿ ಚಾಲನೆ ಮಾಡುವ ಹಾಗೆ ಸೂಕ್ತವಾದ ಸೂಪರ್ ವಿಶನ್ ಮಾಡದೆ ಇದ್ದದರಿಂದ ಹಾಗೂ ಸೂಕ್ತವಾದ ಸುಪರ್ ವೈಸರ್ ರವರನ್ನು ನಿಯೋಜಿಸದೇ ನಿರ್ಲಕ್ಷ್ಯ ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು

ಕಾರ್ಖಾನೆಗಳ ಕಾಯ್ದೆ 1948 ರ ಅಧಿನಿಯಮ 7 ಎ(2)(ಸಿ) ರ ಉಲ್ಲಂಘನೆ ಮಾಡಿ ಕಾರ್ಖಾನೆಗಳ ಕಾಯ್ದೆ 1948 ರ ಕಲಂ 92 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವಿರಿ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರಶ್ನೆ 1) ಮೇಲಿನ ಆಪಾದನೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೇ?

ಉತ್ತರಃ ಆರೋಪಿ 1.

ಆರೋಪಿ 2.

ಪ್ರಶ್ನೆ 2) ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತೀರೋ?

ಉತ್ತರಃ ಆರೋಪಿ 1.

ಆರೋಪಿ 2.

(ಈ ಮೇಲ್ಕಂಡ ಆಪಾದನೆಯನ್ನು ಆರೋಪಿಗಳಿಗೆ ಓದಿ ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

ದಿನಾಂಕಃ **07.06.2023**

**(ಆನಂದ ಎಂ.)**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂ. ಗಳ ನ್ಯಾಯಾಲಯ,ಕೊಳ್ಳೇಗಾಲ